**ದಿನಾಂಕಃ** 27.07.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)
**ಪ್ರಾ.ಸಾಃ 1**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ಆರ್ಯು., ವಕೀಲರಿಂದಃ</u>

2. ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನೀವು ಏನೇ ವ್ಯವಹಾರ ಮಾಡಿದರು ಬ್ಯಾಂಕ್ ಮೂಲಕವೇ ಮಾಡುತ್ತೀರಾ ಅಂದರೆ ಸಾಕ್ಷಿ ಬ್ಯಾಂಕ್ ಮೂಲಕ ಮತ್ತು ನಗದು ರೂಪದಲ್ಲೂ ಮಾಡುತ್ತೇನೆ.

3. ಬ್ಯಾಂಕ್ ಮೂಲಕ ವ್ಯವಹಾರ ಮಾಡುವುದದಾರೇ ಅದರ ರೀತಿ ನಿಯಮಗಳನ್ನು ತಿಳಿದುಕೊಳ್ಳಬೇಕು ಅಂದರೆ ಸಾಕ್ಷಿ ನನಗೆ ಗೊತ್ತಿದ್ದಷ್ಟು ತಿಳಿದುಕೊಂಡಿದ್ದೇನೆ. ರೂ.20 ಸಾವಿರಕ್ಕೂ ಮೇಲ್ಪಟ್ಟ ಹಣದ ವ್ಯವಹಾರ ಮಾಡಬೇಕಾದರೆ ಡಿಡಿ ಅಥವಾ ಚೆಕ್ ಮೂಲಕವೇ ಮಾಡಬೇಕು, ಈ ವಿಚಾರ ನಿಮಗೆ ಗೊತ್ತೇ ಅಂದರೆ ಗೊತ್ತಿಲ್ಲ. ಸದರಿ ವಿಚಾರವನ್ನು ತಿಳಿದುಕೊಳ್ಳಲು ನಿಮಗೇನಾದರೂ ತೊಂದರೆ ಇತ್ತೇ ಅಂದರೆ ಗೊತ್ತಿಲ್ಲ.

4. ನಾನು ಮರದ ಕೆತ್ತನೆ ಕೆಲಸ ಮಾಡುತ್ತೇನೆ. ನನ್ನದೇ ಸ್ವಂತ ಶ್ರೀ ನಂಜುಂಡೇಶ್ವರ್ ವುಡ್ ವರ್ಕಿಂಗ್ ಅಂಗಡಿ ಇಟ್ಟುಕೊಂಡಿದ್ದೆನು. ಈಗ ಖಾಲಿ ಮಾಡಿ ಶ್ರೀ ವುಡನ್ ಕ್ರೆಡಲ್ ಅಂಗಡಿ ನಡೆಸುತ್ತಿದ್ದೇನೆ. ಶ್ರೀ ನಂಜುಂಡೇಶ್ವರ್ ವುಡ್ ವರ್ಕಿಂಗ್ ಅಂಗಡಿ ಸಂಬಂಧವಾಗಿ ನ್ಯಾಯಾಲಯಕ್ಕೆ ಯಾವುದಾದರು ದಾಖಲಾತಿ ಹಾಜರುಪಡಿಸಿದ್ದೀರಾ ಅಂದರೆ ಇಲ್ಲ. ಶ್ರೀ ನಂಜುಂಡೇಶ್ವರ್ ವುಡ್ ವರ್ಕಿಂಗ್ ಅಂಗಡಿ ನಡೆಸಲು ಪರವಾನಿಗೆ ಪಡೆದಿದ್ದೇನೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ, ಅವಶ್ಯಕತೆ ಇದ್ದಲ್ಲಿ ಹಾಜರುಪಡಿಸುತ್ತೇನೆ.

5. ಶ್ರೀ ನಂಜುಂಡೇಶ್ವರ್ ವುಡ್ ವರ್ಕಿಂಗ್ ಅಂಗಡಿಯಿಂದ ಎಷ್ಟು ಆದಾಯ ಇತ್ತು ಅಂದರೆ ನನ್ನ ಪ್ರಕಾರ ತಿಂಗಳಿಗೆ ರೂ.20-30 ಸಾವಿರ ಆದಾಯ ಇತ್ತು. ಈ ಬಗ್ಗೆ ನಾನು ಯಾುವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನಗೆ ಇಂತಿಷ್ಟು ಆದಾಯ ಇದೆ ಎಂದು ನ್ಯಾಯಾಲಯಕ್ಕೆ ದಾಖಲಾತಿ ಹಾಜರಪಡಿಸಲು ನಿಮಗೇನಾದರು ತೊಂದರೆ ಇದೇಯಾ ಅಂದರೆ ಇಲ್ಲ.

6. ಆರೋಪಿ ತಾನು ರಿಯಲ್ ಎಸ್ಟೇಟ್ ಏಜೆಂಟ್ ಕೆಲಸ ಮಾಡುತ್ತೇನೆ ಎಂದು ಹೇಳಿದ್ದರು. ಸದರಿ ವಿಷಯವನ್ನು ನಿಮ್ಮ ನೋಟೀಸಿನಲ್ಲಿ ಆಗಲೀ ಅಥವಾ ಮುಖ್ಯವಿಚಾರಣಾ ಪ್ರಮಾಣಪತ್ರದಲ್ಲಿ ಆಗಲೀ ಅಥವಾ ಪಿರ್ಯಾದಿಯಲ್ಲಿ ಆಗಲೀ ನಮೂದು ಮಾಡಿಲ್ಲ ಅಂದರೆ ಸಾಕ್ಷಿ ಆ ರೀತಿ ಬರೆಸಬೇಕು ಎಂದು ತಿಳಿಯಲಿಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

7. ಆರೋಪಿ ತಮ್ಮ ದೈನಂದಿನ ವ್ಯವಹಾರಕ್ಕಾಗಿ ಹಣ ಬೇಕು ಎಂದು ನನ್ನಿಂದ ಸಾಲ ಪಡೆದಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

8. ಸಾಮಾನ್ಯವಾಗಿ ಸಾಲ ಪಡೆಯುವುದಾದರೆ ಸಾಲದ ಕರಾರು ಪತ್ರ ಮಾಡಿಕೊಳ್ಳುತ್ತಾರೆ ಅಂದರೆ ಸರಿ. ಆ ರೀತಿ ನೀವು ಸಾಲದ ಕರಾರು ಮಾಡಿಕೊಳ್ಳಲು ನಿಮಗೇನಾದರು ತೊಂದರೆ ಇತ್ತೇ ಅಂದರೆ ಸಾಕ್ಷಿ ನನಗೆ ಆಗ ಕರಾರು ಪತ್ರ ಮಾಡಿಕೊಳ್ಳಬೇಕೆಂದು ತಿಳಿಯಲಿಲ್ಲ ಮತ್ತು ಅವರು ವಾಪಸ್ಸು ನೀಡುತ್ತಾರೆ ಎಂಬ ನಂಬಿಕೆ ಇತ್ತು.

9. ಆರೋಪಿಗೆ ಹಣವನ್ನು ಚೆಕ್ ಅಥವಾ ಡಿಡಿ ರೂಪದಲ್ಲಿ ನೀಡಲು ನಿಮಗೇನಾದರು ತೊಂದರೆ ಇತ್ತೇ ಅಂದರೆ ಸಾಕ್ಷಿ ಆಗ ನನ್ನ ಖಾತೆಯಲ್ಲಿ ಅಷ್ಟು ಹಣ ಇರಲಿಲ್ಲ,ಹಾಗಾಗಿ ನಾನು ನಗದು ರೂಪದಲ್ಲಿ ನೀಡಿದ್ದೇನೆ. ನಿಮ್ಮ ಬಳಿ ಆರೋಪಿಗೆ ಸಾಲವಾಗಿ ನೀಡಲು ಅಷ್ಟು ಹಣ ಇರಲಿಲ್ಲ, ಸುಳ್ಳು ನುಡಿಯುುತ್ತಿದ್ದೀರಾ ಅಂದರೆ ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ
ಚನ್ನಪಟ್ಟಣ.